
ಮಾಹಿತಿಯನ್ನು ಮೀರಿ, ಜನರ ಕಥೆಗಳನ್ನು, ಸುತ್ತಮುತ್ತಲಿರುವ ಆತಂಕಗಳನ್ನು ಭಾಟಿಯಾ ಹೆಣೆಯುತ್ತಾರೆ. ಪ್ರಗತಿಯನ್ನು ಅಂಕಿಅಂಶಗಳ ಮಾಹಿತಿಯಲ್ಲಿ ಅಳೆಯಬಹುದಾದರೂ, ಪ್ರಗತಿಯ ಫಲವಾಗಿ ಆಗುವ ಹಾನಿಯನ್ನು ಮಾತ್ರ ಕಥೆ ಮತ್ತು ಕವಿತೆಯ ಮೂಲಕ- ಸಾಹಿತ್ಯದ ಮೂಲಕ- ಗ್ರಹಿಸಬೇಕೆಂದು ಅರ್ಥಶಾಸ್ತ್ರಜ್ಞ ಎಡ್ಮಂಡ್ ಫೆಲ್ಪ್ಸ್ ಹೇಳುತ್ತಾನೆ. ಭಾಟಿಯಾ ಜನರ ಕಥೆಗಳನ್ನು ಹೇಳುತ್ತಿದ್ದಂತೆ ನಮಗೆ ಮಾಹಿತಿಯ ಕೇಂದ್ರೀಕರಣದ ಭಯಾನಕ ದೃಶ್ಯಗಳು ಕಾಣಿಸುತ್ತವೆ. ಕಾರ್ಯಕಾರಣ ಸಂಬಂಧವನ್ನು ಭಾಟಿಯಾ ಏರ್ಪಡಿಸದಿದ್ದರೂ, ಅವರ ಉದ್ದೇಶ ಅದೇ ಆಗಿದೆ.

ಮೊದಲಿಗೆ ಭಾಟಿಯಾ 'ನಾಗರಿಕತೆ ಸಂಶೋಧನಾ ಕಾನೂನು' (ಸಿಟಿಜನ್‌ಷಿಪ್ ಅಮೆಂಡ್‌ಮೆಂಟ್ ಆ್ಯಕ್ಟ್ – ಸಿ.ಎ.ಎ) ಆಂದೋಲನದಿಂದ ತಮ್ಮ ಕಥನವನ್ನು ಪ್ರಾರಂಭಿಸುತ್ತಾರೆ. ಜನಸಾಮಾನ್ಯರ ನಡುವೆ ಹೋಗಿ ಆ ಆಂದೋಲನದಲ್ಲಿ ಪ್ರತ್ಯಕ್ಷ ಅಥವಾ ಪರೋಕ್ಷ ರೂಪದಿಂದ ಪ್ರಭಾವಿತರಾದವರನ್ನು ಸಂಪರ್ಕಿಸಿ ಅವರ ಕಥೆಗಳನ್ನು ಕೇಳುತ್ತಾರೆ. 'ಸಿಎಎ' ಆಂದೋಲನಕ್ಕೂ, ಪೂರ್ವೋತ್ತರ ದೆಹಲಿಯಲ್ಲಿ ನಡೆದ ಕೋಮುಗಲಭೆಗೂ ಇರಬಹುದಾದ ಸಂಬಂಧವನ್ನು ನಿಧಾನವಾಗಿ, ಸಾವಕಾಶವಾಗಿ ಬಿಡಿಸಿ ನಮ್ಮ ಮುಂದಿಡುತ್ತಾರೆ. ಜನರಿಗೆ ಕೋಮುಗಲಭೆ ಆಗುವುದರ ಮುನ್ಸೂಚನೆಗಳು ಸಿಗುತ್ತಿವೆ. ಕೆಲವರು ಅಲ್ಲಿಂದ ಪಲಾಯನ ಮಾಡುತ್ತಾರೆ. ಒಬ್ಬ ಡಾಕ್ಟರು ತನ್ನ ಆಸ್ಪತ್ರೆಯನ್ನು ತೆರೆದು ಖುದ್ದು ಶುಶ್ರೂಷೆಗಾಗಿ ನಿಲ್ಲುತ್ತಾನೆ. ಈ ಕೋಮುಗಲಭೆಯಲ್ಲಿ ಭಾಗವಹಿಸಿದ್ದವರನ್ನು ಕಾನೂನಿನ ಸುಪರ್ದಿಗೆ ಒಪ್ಪಿಸಿ ನ್ಯಾಯ ಪಡೆಯಲು ಒಬ್ಬ ಶ್ರೀಸಾಮಾನ್ಯ ಕಂಕಣತೊಟ್ಟು ನಿಂತಿದ್ದಾನೆ. ಅವನು ಎಫ್‌ಐಆರ್ ಕೊಟ್ಟ ಸಮಯದಿಂದ ಕೋರ್ಟು ಕಚೇರಿಗಳನ್ನಲೆಯುವ ಕಾಲವನ್ನು, ಆತ ವೈಯಕ್ತಿಕವಾಗಿ ಪಡೆಯುವ ಕಷ್ಟಕಾರ್ಪಣ್ಯಗಳನ್ನು, ಆ ವ್ಯಕ್ತಿಯ ಹಿಂದಿದ್ದೇ ಭಾಟಿಯಾ ದಾಖಲಿಸುತ್ತಾರೆ. ಅಪರಾಧವೆಸಗಿದವರಿಗೆ ಒಂದು ರೀತಿಯ ರಕ್ಷಣೆಯಿದೆ. ಸರ್ಕಾರಕ್ಕೆ ವ್ಯಕ್ತವಾಗಿ ಕಾಣುವ ಮುಖವಿಲ್ಲ. ಹೀಗಾಗಿ ಈ ಪ್ರಕ್ರಿಯೆಯಲ್ಲಿ ಸಂಸ್ಥೆಗೆ ಸುಸ್ತಾಗುವುದಿಲ್ಲ. ಆದರೆ ವ್ಯಕ್ತಿ – ಒಂದು ನಿರ್ದಿಷ್ಟ ವ್ಯಕ್ತಿಯಾದ್ದರಿಂದ (ವಕೀಲರ




ಸಹಾಯವಿದ್ದಾಗ್ಯೂ) ಒಂಟಿಯಾಗಿ ಹೋರಾಡಬೇಕು. ಅಧಿಕಾರಿಗಳು ಸಹಕಾರ ಕೊಡದಿದ್ದಾಗ ಇದು ತಾಳ್ಮೆಯ ಕಷ್ಟದ ಕೆಲಸ. ಒಂದು ಕ್ಷಣ ತಾಳ್ಮೆ ಕಳೆದುಕೊಂಡರೂ ನ್ಯಾಯ ದಕ್ಕದೇ ಹೋಗಬಹುದು.

'ಸಿಎಎ' ಆಂದೋಲನದಲ್ಲಿಯೇ ಜಾಮಿಯಾ ಮೇಲೆ ಆಗುವ ಹಲ್ಲೆಯಲ್ಲೂ ಒಂದು ಕೋಮಿನ ವಿರುದ್ಧವೇ ಆಗಿರುವುದು ನಮಗೆ ಕಾಣುತ್ತದೆ. ಅಲ್ಲಿ ವ್ಯಕ್ತಿಯ ಗುರುತಿಲ್ಲ. ಅದು ಸಮೂಹದ, ಸಮುದಾಯದ, ಕೋಮಿನ ಗುರುತು. ಅವರುಗಳು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದಾರೆ. ಅವರನ್ನು ಬಲಪ್ರಯೋಗ ಮಾಡಿ ದಮನ ಮಾಡಬೇಕು. ಜಾಮಿಯಾ ಹೆಸರು, ಅದಿರುವ ಜಾಗ, ಅದನ್ನು ನಡೆಸುತ್ತಿರುವವರ ಹಿನ್ನೆಲೆ ಮತ್ತು ಅಧಿಕ ವಿದ್ಯಾರ್ಥಿಗಳು ಯಾವ ಕೋಮಿಗೆ ಸಂದವರೆನ್ನುವುದೇ ಅದರ ಗುರುತು. ಗುರುತೇ ಹಲ್ಲೆಗೆ ಆಹ್ವಾನ ಕೊಡುತ್ತದೆ. ಜವಾಹರಲಾಲ ನೆಹರೂ ವಿಶ್ವವಿದ್ಯಾಲಯದ ಮೇಲಿನ ಹಲ್ಲೆಯೂ ಎಡಪಂಥೀಯ ರಾಜಕೀಯದ